# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 977
2. ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 15.12.2025
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಮಂಡ್ಯ ನಗರದಲ್ಲಿದ್ದ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಅಧೀನದ ಫೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ಯಾವಾಗ ಆರಂಭಿಸಲಾಯಿತು; ನಂತರ, ಈ ಕೇಂದ್ರವನ್ನು ಯಾವ ವರ್ಷ ಎಷ್ಟು ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು ಅನುಮೋದಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಮಂಡ್ಯ ನಗರದಲ್ಲಿದ್ದ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಅಧೀನದ ಫೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು 1994ರಲ್ಲಿ ಪ್ರಾರಂಭಿಸಲಾಯಿತು. ತದನಂತರ ಸರ್ಕಾರ ಆದೇಶ ಸಂಖ್ಯೆ:ಆಕುಕ 98 ಎಂಪಿಎಸ್ 2006, ದಿನಾಂಕ:31.01.2007ರಲ್ಲಿ ಸದರಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನಕ್ಕೆ ಒಳಪಡಿಸಲಾಗಿರುತ್ತದೆ.<br><br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿದ್ದ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು National Programme for prevention and control of Cancer, Diabetes, Cardiovasculaor Diseases and stroke (NPCDCS) ಯೋಜನೆಯಡಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರೂ.4500.00 ಲಕ್ಷಗಳ ಅನಾವರ್ತಕ ವೆಚ್ಚ ಹಾಗೂ ರೂ.1118.00 ಲಕ್ಷಗಳ ಆವರ್ತಕ ವೆಚ್ಚ ಸೇರಿದಂತೆ ಒಟ್ಟು ರೂ.5618.00 ಲಕ್ಷಗಳ ಮೊತ್ತದಲ್ಲಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗೆ ಸರ್ಕಾರದ ಆದೇಶ ಸಂಖ್ಯೆ:ಆಕುಕ 228 ಎಂಪಿಎಸ್ 2016, ದಿನಾಂಕ:21.03.2017ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.<br><br>ರೂ.4500.00 ಲಕ್ಷಗಳ ಅನಾವರ್ತಕ ವೆಚ್ಚದಲ್ಲಿ ರೂ.1200.00 ಲಕ್ಷಗಳ ಸಿವಿಲ್ ಕಾಮಗಾರಿಗಳು ಹಾಗೂ ರೂ.3300.00 ಲಕ್ಷಗಳ ಮೊತ್ತದ ಉಪಕರಣಗಳು ಒಳಗೊಂಡಿರುತ್ತವೆ. ಈ ರೂ.4500.00 ಲಕ್ಷಗಳಲ್ಲಿ ಕೇಂದ್ರ ಸರ್ಕಾರವು ಶೇ.60ರಷ್ಟು ಅಂದರೆ, ರೂ.2700.00 ಲಕ್ಷಗಳನ್ನು ಹಾಗೂ ರಾಜ್ಯ ಸರ್ಕಾರವು ಶೇ.40ರಷ್ಟು ಅಂದರೆ ರೂ.1800.00 ಲಕ್ಷಗಳನ್ನು ಭರಿಸಲಿದೆ. |

<table>
<tr>
<td>(ಆ)</td>
<td>ಟರ್ಷಿಯರಿ ಕ್ಯಾನ್ಸರ್ ಕೇಂದ್ರವಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನಿಗದಿಯಾದ, ಬಿಡುಗಡೆಯಾದ, ಬಿಡುಗಡೆ ಆಗಬೇಕಿರುವ ಮತ್ತು ಈವರೆವಿಗೂ ಭರಿಸಲಾದ ವೆಚ್ಚ ಎಷ್ಟು; (ವಿವರ ನೀಡುವುದು)</td>
<td>ಟರ್ಷಿಯರಿ ಕ್ಯಾನ್ಸರ್ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಸಂಬಂಧ ರೂ.4500.00ಲಕ್ಷಗಳ ಅನಾವರ್ತಕ ವೆಚ್ಚವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡರಿಂದಲೂ ಬಿಡುಗಡೆ ಮಾಡಬೇಕಾಗಿರುತ್ತದೆ. ಇನ್ನುಳಿದಂತೆ ರೂ.1118.00 ಲಕ್ಷಗಳ ಆವರ್ತಕ ವೆಚ್ಚವನ್ನು ರಾಜ್ಯ ಸರ್ಕಾರದಿಂದ ಮಾತ್ರ ಬಿಡುಗಡೆ ಮಾಡಬೇಕಾಗಿರುತ್ತದೆ.<br><br>ರೂ.4500.00 ಲಕ್ಷಗಳ ಅನಾವರ್ತಕ ವೆಚ್ಚವು ಸಿವಿಲ್ ಕಾಮಗಾರಿ ಹಾಗೂ ಉಪಕರಣಗಳ ಖರೀದಿಯನ್ನೊಳಗೊಂಡಿದ್ದು, ಅದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿಗದಿಯಾದ, ಬಿಡುಗಡೆಯಾದ, ಬಿಡುಗಡೆ ಆಗಬೇಕಿರುವ ಮತ್ತು ಈವರೆವಿಗೂ ಭರಿಸಲಾದ ವೆಚ್ಚದ ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ:
<table>
<tr><th>ಕ್ರ. ಸಂ</th><th>ಅನಾವರ್ತಕ ವೆಚ್ಚ (ರೂ.4500.00)</th><th>ನಿಗದಿಗೊಳಿಸಿದ ಅನುದಾನ</th><th>ಬಿಡುಗಡೆಯಾದ ಅನುದಾನ</th><th>ಬಿಡುಗಡೆಗೆ ಬಾಕಿ ಇರುವ ಅನುದಾನ</th></tr>
<tr><td>1</td><td>ಕೇಂದ್ರದ ಪಾಲು (60%)</td><td>2700.00</td><td>1725.70</td><td>974.30</td></tr>
<tr><td>2</td><td>ರಾಜ್ಯದ ಪಾಲು (40%)</td><td>1800.00</td><td>1276.30</td><td>523.70</td></tr>
<tr><td></td><td>ಒಟ್ಟು</td><td>4500.00</td><td>3002.00</td><td>1498.00</td></tr>
</table>
ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಮೇಲ್ಕಂಡಂತೆ ಬಿಡುಗಡೆಯಾಗಿರುವ ರೂ.3002.00 ಲಕ್ಷಗಳ ಅನುದಾನದಲ್ಲಿ, ಸಿವಿಲ್ ಕಾಮಗಾರಿಗಳಿಗೆ ರೂ.1155.00 ಲಕ್ಷಗಳನ್ನು ಮತ್ತು ಉಪಕರಣಗಳ ಖರೀದಿಗಾಗಿ ರೂ.1839.24 ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ಬಾಕಿ ರೂ.7.76 ಲಕ್ಷಗಳು Single Nodal Agency (SNA) ಖಾತೆಯಲ್ಲಿ ಲಭ್ಯವಿರುತ್ತದೆ.</td>
</tr>
<tr>
<td>(ಇ)</td>
<td>ಸಿವಿಲ್ ಕಾಮಗಾರಿಗಳ ಪ್ರಗತಿ ಪ್ರಸ್ತುತ ಯಾವ ಯಂತದಲ್ಲಿದೆ; ಬಾಕಿ ಉಳಿದಿರುವ ಕೆಲಸಗಳು ಯಾವುವು; ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು;(ಶೇಕಡವಾರು ಪ್ರಗತಿಯೊಂದಿಗೆ ವಿವರವಾದ ಮಾಹಿತಿ ನೀಡುವುದು)</td>
<td>ಸಿವಿಲ್ ಕಾಮಗಾರಿಗಳ ಕೆಲಸವು ಶೇ.80 ರಷ್ಟು ಮುಕ್ತಾಯಗೊಂಡಿದ್ದು, ಬಂಕರ್ ಕೆಲಸವು ಶೇ.20ರಷ್ಟು ಬಾಕಿ ಇದ್ದು, ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ. ಬಂಕರ್ ಕಾಮಗಾರಿಯನ್ನು ಮುಂದಿನ 03 ತಿಂಗಳೊಳಗೆ ಪೂರ್ಣಗೊಳಿಸಲಾಗುವುದು.</td>
</tr>
<tr>
<td>(ಈ)</td>
<td>ಚಿಕಿತ್ಸಾ ವಿಭಾಗಕ್ಕೆ ಈವರೆವಿಗೂ ಯಾವ ಯಾವ ಉಪಕರಣಗಳನ್ನು ಖರೀದಿಸಲಾಗಿದೆ; ಎಷ್ಟು ಉಪಕರಣಗಳನ್ನು ಅಳವಡಿಸಲಾಗುತ್ತದೆ; ಹಾಗೂ, ಖರೀದಿಸಲು ಬಾಕಿ ಉಳಿದಿರುವ ಉಪಕರಣಗಳು ಯಾವುವು; ಈ ಪ್ರಕ್ರಿಯೆ ಯಾವ ಹಂತದಲ್ಲಿದೆ;</td>
<td>Linear Accelerator, Dosi Meter ಉಪಕರಣವನ್ನು ಇ-ಟೆಂಡರ್ ಮುಖಾಂತರ ಖರೀದಿಸಿ ಸರಬರಾಜು ಮಾಡಲಾಗಿರುತ್ತದೆ. ಶೇ.20ರಷ್ಟು ಬಾಕಿ ಇರುವ ಸಿವಿಲ್ ಕಾಮಗಾರಿಯ ಕೆಲಸವು ಪೂರ್ಣಗೊಂಡ ತಕ್ಷಣವೇ ಬಾಕಿ ಉಪಕರಣಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗುತ್ತದೆ.</td>
</tr>
</table>

| | | |
|---|---|---|
| (ಉ) | ಸಿವಿಲ್ ಕಾಮಗಾರಿ ಮತ್ತು ಉಪಕರಣಗಳ ಖರೀದಿಗೆ ಈವರೆವಿಗೂ ಭರಿಸಲಾಗಿರುವ ಒಟ್ಟು ವೆಚ್ಚ ಎಷ್ಟು; | ರೂ.4500.00 ಲಕ್ಷಗಳ ಅನಾವರ್ತಕ ವೆಚ್ಚದಲ್ಲಿ ರೂ.1200.00 ಲಕ್ಷಗಳ ಸಿವಿಲ್ ಕಾಮಗಾರಿಗಳು ಹಾಗೂ ರೂ.3300.00 ಲಕ್ಷಗಳ ಮೊತ್ತದ ಉಪಕರಣಗಳು ಒಳಗೊಂಡಿರುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ರೂ.1155.00 ಲಕ್ಷಗಳನ್ನು ಸಿವಿಲ್ ಕಾಮಗಾರಿಗೆ ವೆಚ್ಚ ಮಾಡಲಾಗಿರುತ್ತದೆ. ತದನಂತರ ಈ ಯೋಜನೆಯ ಸಿವಿಲ್ ಕಾಮಗಾರಿಯು ಪರಿಷ್ಕೃತಗೊಂಡಿದ್ದು, ರೂ.1740.00 ಲಕ್ಷಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, ಸದರಿ ಹೆಚ್ಚುವರಿ ಅನುದಾನ ರೂ.565.00 ಲಕ್ಷಗಳನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದಿಂದ ಒದಗಿಸಲಾಗಿರುತ್ತದೆ.<br><br>ಉಪಕರಣಗಳ ಖರೀದಿಗಾಗಿ ರೂ.1839.24 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. |
| (ಊ) | ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ಟರ್ಷಿಯರಿ ಕ್ಯಾನ್ಸರ್ ಕೇಂದ್ರವಾಗಿ ಮೇಲ್ದರ್ಜೆಗೇರಿಸಿದ ನಂತರ ರೋಗಿಗಳಿಗೆ ಯಾವ ಯಾವ ರೀತಿಯ ಹೆಚ್ಚಿನ ಚಿಕಿತ್ಸಾ ಸೌಲಭ್ಯಗಳು ದೊರೆಯಲಿವೆ; (ಸಂಪೂರ್ಣ ವಿವರ ನೀಡುವುದು) | ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ಟರ್ಷಿಯರಿ ಕ್ಯಾನ್ಸರ್ ಕೇಂದ್ರವಾಗಿ ಮೇಲ್ದರ್ಜೆಗೇರಿಸಿದ ನಂತರ ರೋಗಿಗಳಿಗೆ ರೇಡಿಯೋಥೆರಪಿ, ಕಿಮೋಥೆರಪಿ, ಶಸ್ತ್ರಚಿಕಿತ್ಸೆಗಳು ಹಾಗೂ ಉಪಶಮನ ಚಿಕಿತ್ಸಾ ಸೌಲಭ್ಯಗಳು ದೊರಕಲಿವೆ. |
| (ಋ) | ಮಿಮ್ಸ್ ಟರ್ಷಿಯರಿ ಕ್ಯಾನ್ಸರ್ ಕೇಂದ್ರವನ್ನು ಮೇಲ್ದರ್ಜೆಗೇರಿಸಲಾದ ಸಂಬಂಧ ಅವಶ್ಯಕವಿರುವ ಬೋಧಕ, ಬೋಧಕೇತರ ಮತ್ತು ತಾಂತ್ರಿಕ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹೊಸದಾಗಿ ಈ ಹುದ್ದೆಗಳನ್ನು ಸೃಜಿಸಲು ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ಮಿಮ್ಸ್ ಟರ್ಷಿಯರಿ ಕ್ಯಾನ್ಸರ್ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಬೋಧಕ-29 ಹುದ್ದೆಗಳು ಹಾಗೂ ಬೋಧಕೇತರ-190 ಹುದ್ದೆಗಳು ಸೇರಿದಂತೆ ಒಟ್ಟಾರೆಯಾಗಿ 219 ಹುದ್ದೆಗಳನ್ನು ಸೃಜಿಸುವ ಸಂಬಂಧ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ:** ಎಂಇಡಿ 955 ಎಂಪಿಎಸ್ 2025

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.